# ಶಾಸ್ತ್ರಸರಣಿ ದಾಸವಾಣಿ
# ಭಾಗ-೫

ಶ್ರೀ ಪರಮಾತ್ಮನು ಅನಂತಕಲ್ಯಾಣ ಗುಣಪೂರ್ಣನೆಂದೂ ಮತ್ತು ಸಕಲ ದೋಷವಿವರ್ಜಿತನೆಂದೂ ಶ್ರುತಿ ಸ್ಮೃತಿಗಳು ಸಾರಿಸಾರಿ ಪದೇಪದೇ ಉಪಪಾದನ ಮಾಡುತ್ತೇವೆ. ಇವುಗಳಲ್ಲಿ ಒಂದೊಂದು ಗುಣಪೂರ್ಣವಾಗಿದೆ. ಈ ಅನಂತ ಕಲ್ಯಾಣಗುಣಗಳಲ್ಲಿ ಜೀವಸಂಘ ವಿವಕ್ಷಾದಿಂದ ಪರಮಾತ್ಮನ ಕರುಣಾಪೂರ್ಣ ಗುಣವು. ಬಹಳ ವೈಶಿಷ್ಟ್ಯಪೂರ್ಣವಾದದ್ದು. ಶ್ರೀಮದಾಚಾರ್ಯರು ಪರಮಾತ್ಮನ ಕರುಣಾಪೂರ್ಣಗುಣವನ್ನು ಸ್ತೋತ್ರ ಮಾಡಿದ್ದಾರೆ.

**"ಅವನ ಶ್ರೀಪತಿರಪ್ರತಿರಧಿಕೇಶಾದಿಭವಾದೇ|**
**ಕರುಣಾಪೂರ್ಣ ವರಪ್ರದ ಚರಿತಂ ವಿಜ್ಞಾಪಯ ಮೇತೆ||"**
**(ದ್ವಾದಶಸ್ತೋತ್ರ ಅಧ್ಯಾಯ ೧೦)**

ಉತ್ತಮರನ್ನು ಆಶ್ರಯಿಸಬೇಕಾದರೆ ಉತ್ತಮರಲ್ಲಿ ಈ ಕಾರುಣ್ಯ ಗುಣದ ಅವಶ್ಯಕತೆ ಇದೆ. ಉತ್ತಮರು ಅವರಲ್ಲಿ ಕ್ರೌರ್ಯ, ಕಾಠಿಣ್ಯ, ಅಕ್ಷಮ ಭಾವಗಳಾನ್ನು ವ್ಯಕ್ತಪಡಿಸಿದರೆ ಅವರು ಉತ್ತಮರನ್ನು ಅನುಸರಿಸಲಾರರು. ಅಲ್ಪ ಕಾಲ ಭಯದಿಂದ ಹಿಂಬಾಲಿಸಬಹುದು. ಈ ತರಹದ ಭಯೋತ್ಪಾದನೆಯಿಂದ ಉಂಟಾದ ಸಂಬಂಧಗಳು ತೀವ್ರ ಕಳಚಿ ಹೋಗುತ್ತವೆ.

ಪರಮಾತ್ಮನು ತನ್ನನ್ನು ನಂಬಿ ಆರಾಧಿಸುವವರಲ್ಲಿ ಮುಖ್ಯವಾಗಿ ಅನಿಮಿತ್ತ ಕಾರುಣ್ಯಗಳನ್ನು ವ್ಯಕ್ತ ಪಡಿಸುತ್ತಾನೆ. ಇಂಥ ಕಾರುಣ್ಯಕ್ಕೆ ಪಾತ್ರರಾದ ಭಕ್ತರನ್ನು ಶ್ರವಣಾದಿ ದ್ವಾರ ತಿಳಿದು ಪರಮಾತ್ಮನನ್ನು ಸಜ್ಜೀವರುಗಳು ಆರಾಧಿಸುತ್ತಾರೆ.

ದುರ್ಜನರಿಗೆ ಮತ್ಸರ, ಇನ್ನು ಕೆಲವರು ಉದಾಸೀನ ಧರ್ಮದಲ್ಲಿರುತ್ತಾರೆ. ಪರಮಾತ್ಮನು ತನ್ನ ನಂಬಿದ ಎಲ್ಲರಲ್ಲಿ ಸ್ವಪರದ್ವಾರಾ ಒಂದು ಆಶಾಕಿರಣವನ್ನು ಮೂಡಿಸುತ್ತಾನೆ. "ಜಾನಾತಿ, ಇಚ್ಛತೆ, ಯತತೆ" ಎಂಬ ಕ್ರಮಾನುಸಾರವಾಗಿ ಒಂದು ಸಲ ತಿಳಿದ ಮನಸ್ಸು ದಿನೇ ದಿನೇ ಪರಮಾತ್ಮನ ವಿಷಯದಲ್ಲಿ ಅಧಿಕ ಸ್ನೇಹ, ಸ್ನೇಹದಲ್ಲಿ ದಾರ್ಢ್ಯ ಸಂಪಾದಿಸಲು ಪ್ರಯತ್ನ ಮಾಡುತ್ತದೆ.

ದಾಸರಾಯರು ಸಹ ಪರಮಾತ್ಮನ ಕಾರುಣ್ಯ ಗುಣವನ್ನು ಬಹಳವಾಗಿ ಕೊಂಡಾಡಿದ್ದಾರೆ. ಹರಿಕಥಾಮೃತಸಾರದಲ್ಲಿ ಶ್ರೀಜಗನ್ನಾಥದಾಸರು ಒಂದು ಸಂಧಿಯನ್ನೇ ಈ ಕರುಣಾಗುಣಕ್ಕೆ ಮೀಸಲಿಟ್ಟಿದ್ದಾರೆ. ಸಂಧಿಯ ಹೆಸರೇ **"ಕರುಣಾ ಸಂಧಿ"** ಇದೇ ಎರಡನೆಯ ಸಂಧಿ, **"ಏನು ಕರುಣಾನಿಧಿಯೋ ಹರಿಮತ್ತೇನು ಭಕ್ತಾಧೀನನೋ",** ಎಂದು ಅವರ ಸ್ತುತಿ. ಪರಮಾತ್ಮನ ಅನಿಮಿತ್ತೋಪಕಾರ ರೂಪ ಕಾರುಣ್ಯಕ್ಕೆ ಭಕ್ತನ ಹೃದಯ ಕರಗಿ ಆನಂದಾಶ್ರುಗಳು ನಯನದ್ವಾರ ಕೋಡಿಯಾಗಿ ಹರಿಯುತ್ತವೆ.

ಭಾಗವತವು ಭಕ್ತಿ ಪ್ರಧಾನ ಗ್ರಂಥ. ಭಕ್ತನ ಭಕ್ತಿಮೂಲ ಪರಮಾತ್ಮನ ಕಾರುಣ್ಯ ಸ್ಮೃತಿಗಳ ಮೂಲಕ ಈ ಕಾರುಣ್ಯ ಪೂರ್ಣಗುಣವನ್ನು ಶ್ರವಣ ಮಾಡಿ ಭಕ್ತಿ ದಾರ್ಢ್ಯ ಬಂದ ಶ್ರೀ ದಾಸರಾಯರು ಅಂದಿನಿಂದಲೇ ನಿನ್ನನ್ನು ನಂಬಿರುವೆನು ಸ್ವಾಮೀ ಎಂದು ಸ್ತುತಿಸುತ್ತಾರೆ ಶ್ರೀ ಹರಿಯನ್ನು.

**ಅಂದಿಂದ ನಾ ನಿನ್ನ ನೆರೆನಂಬಿದೆನೊ ಕೃಷ್ಣ|**
**ತಂದೆಗೋವಿಂದ ಮುಕುಂದ ನಂದನಕಂದ||**

ಹೇ ಕೃಷ್ಣ, ಗೋವಿಂದ, ತಂದೆ ನಿನ್ನನ್ನು ಅಂದಿನಿಂದಲೇ ದೃಢವಾಗಿ ಸಂಪೂರ್ಣವಾಗಿ ನಂಬಿದ್ದೇನೆ.
ಎಂದಿನಿಂದ ದಾಸರೇ!

ಅಂದು ಭಾಗವತ ಕಥಾ ಶ್ರವಣ ಮಾಡುವಾಗ ಬಂದ ಪ್ರಸಂಗವನ್ನು ಕೇಳೀ;

**ಬಲವಂತ ಉತ್ತಾನ ಪಾದರಾಯನ ಕಂದ|**
**ಮಲತಾಯಿ ನೂಕಲು ಅಡವಿಯೊಳಗೆ||**
**ಜಲಜಾಕ್ಷ ನಿನ್ನನ್ನು ಕುರಿತು ತಪವಿರಲಾಗೆ|**
**ನೀನನಗೆ ಧೃವಪಟ್ಟ ಕಟ್ಟಿದ್ದು ಕೇಳಿ||೧||**

ಧೃವರಾಯ ಸಣ್ಣ ಬಾಲಕ. ಏನೋ ಹುಡುಗ ಸ್ವಭಾವ ಸಿಟ್ಟು ಮಾಡಿಕೊಂಡು ಕಾಡಿಗೆ ಬಂದಿದ್ದಾನೆ. ಸಿಟ್ಟು ಇಳಿದ ಮೇಲೆ ಮನೆಗೆ ಗೋಗುತ್ತಾನೆಂದು ಉಪೇಕ್ಷೆ ಮಾಡಲಿಲ್ಲ. ಅನನ ತಪಸ್ಸಿಗೆ ಮೆಚ್ಚಿ ಬಾಲಕನಿಗೆ ಸ್ಥಿರವಾದ ಧೃವ ಪಟ್ಟ ಕೊಟ್ಟದ್ದು ಕೇಳಿ, ಶ್ರವಣಮಾಡಿ, ಪರಮಾತ್ಮನ ಕಾರುಣ್ಯ ಗುಣ ಕಥನಕೇಳಿ ಅಂದಿನಿಂದ ಕೃಷ್ಣಾ ನಿನ್ನನ್ನೇ ನೆರೆ ನಂಬಿದೆ.

ಪರಮಾತ್ಮನಲ್ಲಿ ನಂಬಿಕೆ ಹುಟ್ಟಿಸುವ ಪ್ರಸಂಗ ಇದು ಒಂದೆಯೇ ದಾಸರೇ!
ಅದೇಕೆ? ಅವಸರ ಪಡಬೇಡಿರಿ. ಲೆಖ್ಖವಿಲ್ಲದಷ್ಟು ಪ್ರಸಂಗಗಳಿವೆ. ಅಸಂಖ್ಯಾತ ಭಗವದ್ಭಕ್ತರು ಕರುಣಾಭಾಗಿಗಳಾಗಿ ಬಿಟ್ಟಿದ್ದಾರೆ.

**ನಕ್ರಂಗೆ ಗಜರಾಜ ಸಿಕ್ಕಿ ಸರಸಿಯೊಳು|**
**ದುಃಖದಿ ಶ್ರೀ ಹರಿ ಸಲ ಹೊನ್ನಲು||**
**ಚಕ್ರದಿ ನೆಗಳ ಕಂಠವ ತರಿದು ಭಕ್ತನ|**
**ವಕ್ರವ ಪರಿದಾದಿ ಮೂಲನೆಂಬುದ ಕೇಳಿ||೨||**

ಇಲ್ಲಿಯೂ ಅಷ್ಟೆ ಅನೇಕ ವನ್ಯ ಪ್ರಾಣಿಗಳು ಹುಟ್ಟುತ್ತವೆ. ಸಾಯುತ್ತವೆ. ಮತ್ತು ವನ್ಯ ಪ್ರಾಣಿ ಎಂದು ಉದಾಸೀನವಿಲ್ಲ, ಗಜರಾಜ ಕರೆದಾಗ ಕೃಷ್ಣ ಪರಮಾತ್ಮನಿಗದೇನವಸರ ರುಕ್ಮಿಣಿದೇವಿಯರು ಪಕ್ಕದಲ್ಲಿದ್ದರೂ ಸಹ ಒಂದು ಮಾತು ಹೇಳಿ ಹೋಗಲೂ ಸಹ ಸಮಯವಿಲ್ಲದಂತಾಯಿತು.
(**"ಮಡದಿಯಿಡನುಡಿಯದಲೆ ಸಂಗಡ ಎಡಬಲದವರ ಕಡೆಗೆ ನೋಡದೆ| ತಡೆಯದಲೆ ನೀನೊದಗಿ ಕರಿಯ ತೋಡರು ಬಿಡಿಸಿದೆ ಕಡು ದಯಾನಿಧೆ ವರದಾ ಕಂಚಿವರದಾ"||**
ಎನ್ನುತ್ತಾರೆ ಗುರುಗೋಪಾಲವಿಠರು). ಸೃಷ್ಟಿ ಕರ್ತನಾದ ಭಗವಂತನಿಗೆ ತನ್ನಿಂದ ಸೃಷ್ಟಿಯಾದ ಯಾವ ಪ್ರಾಣಿಗಳಲ್ಲೂ ಉಪೇಕ್ಷೆ ಇಲ್ಲ. ಸರ್ವರಿಗೂ ಸರ್ವದಾ ಆತನ ರಕ್ಷೆ ಕರುಣೆಗಳು ಸಿದ್ಧವಾಗಿವೆ ಎಂಬ ತತ್ವದ್ಯೋತಕ ಭಾಗವತ ಕಥಾ ಶ್ರವಣ ಕೇಳಿದಂದಿನಿಂದ (ಶ್ರವಣ ಮಾಡಿದಂದಿನಿಂದ) ಈ ನಿರ್ಧಾರಕ್ಕೆ ಬಂದಿದ್ದೇನೆ.

ಇದರಲ್ಲಿ ಇನ್ನೊಂದು ಸೋಜಗವಿದೆ. ಏನೆಂದರೆ, ಕರಿರಾಜನು ಆದಿಮೂಲ ರಕ್ಷಿಸು ಎಂದು ಮೊರೆ ಇಟ್ಟಾಗ ಇತರ ದೇವತೆಗಳಿಗೆ ಆ ಆರ್ತರವ ಕೇಳಿದರೂ ಯಾರು ರಕ್ಷಿಸಲು ಮುಂದೆ ಬರಲಿಲ್ಲ. ಕೇಳಿದರೂ ಕೇಳದಂತಿದ್ದರು. ಯಾಕೆಂದರೆ ಗಜರಾಜ ಕರೆಯುತ್ತಿರುವ ವ್ಯಕ್ತಿಯು ತಾವೆಲ್ಲವೆಂದು ತಿಳಿದು, ಧ್ವನಿ ಕೇಳಿದರೂ ಯಾರೂ ಬರಲಿಲ್ಲ. ಆದಿ ಮೂಲನೇ ಬಂದು ರಕ್ಷಿಸಿದನೆಂಬ ಕಥಾ ಶ್ರವಣ ಮಾಡಿ ಅಂದಿನಿಂದಲೇ ನೆರೆ ನಂಬಿದೆ.

ಇನ್ನೊಂದು ಸಂದರ್ಭ ಭಾರತ ಕಥಾ ಶ್ರವಣ.

**ದ್ರುಪದ ಸುತೆಯು ದುಶ್ಯಾಸನ ಸಭೆಯೊಳು|**

**ಕಪಟದಿ ಸೀರೆಯ ಸೆಳೆಯುತಿರೆ||**
**ಸುಪರ್ಣವಾಹನ ಕೃಷ್ಣ ಸಲಹೆಂದರಬಲೆಯ|**
**ಅಪಮಾನದಿಂ ಕಾಯ್ದ ಶ್ರೀ ಹರಿ ಎಂಬುದ ಕೇಳಿ||೩||**

ಇದೊಂದು ಅತ್ಯಂತ ದುರಂತ ಸಮಯ ಇಂಥ ಸಮಯಕ್ಕೊದಗುವನು ಹರಿಯೊಬ್ಬನೆಂದೇ ಜನಜನಿತವಾಯಿತು. ಹೀನಕಾರ್ಯವೆಸಗಲು ತೊಡಗಿದ ಕೌರವನ ಸಭೆ ಭಗವಂತನು ಭಕ್ತರಿಗೆ ತೋರಿಸಿದ ಅಪಾರ ಕಾರುಣ್ಯ ರಕ್ಷಣೆಯನ್ನು ಕಣ್ಣಾರೆ ಕಂಡು ನಾಚಿತು.

ಇನ್ನೊಂದು ಸಂದರ್ಭ ಭಾಗವತ ಕಥಾ ಶ್ರವಣ
**"ಹರಿ ನಾರಾಯಣ ಎಂದು ಪ್ರಲ್ಹಾದ ಬರೆಯಲು|**
**ದುರುಳದಾನವ ಅವನೊಳು ಮುನಿದು||**
**ಕರೆ ನಿನ್ನೊಡೆಯನ ಎಂದು ಗರ್ಜಿಸೆ ನರ|**
**ಹರಿ ಬಂದು ಒಡನೆಯೇ ಕಾಯ್ದನೆಂಬುದ ಕೇಳಿ"||೪||**

ಭಕುತನಿಗಾಗಿ ತತ್ಕಾಲದಲ್ಲಿ ಕಂಬದಿಂದ ಒದಗಿದರೂಪ. ಇದೊಂದು ವಿಶೇಷ ರೂಪ. ಬ್ರಹ್ಮದೇವರ ವರವನ್ನು ಕಾಯ್ದು ಭಕುತನನ್ನು ಕಾಯ್ದು, ದುಷ್ಟದಾನವನನ್ನು ಸಂಹಾರ ಮಾಡಿದ ರೂಪ.

ಪುನಃ ಇನ್ನೊಂದು ಭಗವತ ಸಂದರ್ಭ
**"ಅಂಬರೀಷಗೆ ದೂರ್ವಾಸ ಮುನಿಯು ಶಾಪವಕೊಡೆ|**
**ಅಂಬುಜ ಲೋಚನ ಚಕ್ರದಿಂದ||**
**ಬೆಂಬತ್ತಿ ಮುನಿ ಶಾಪವ ಪರಿಹರಿಸಿದ|**
**ಕಂಬು ಚಕ್ರಧರ ಹರಿ ಎಂಬುದ ಕೇಳಿ||೫||"**

ಸಂದರ್ಭ ಸ್ಪಷ್ಟವಾಗಿ ವರ್ಣಿತವಾಗಿದೆ
ಮತ್ತೊಂದು ಸಂದರ್ಭ ರಾಮಾಯಣಾ ಕಥಾ ಸಂದರ್ಭ

**"ಛಲ ಬೇಡ ರಾಮನ ಲಲನೆಯ ಬಿಡು ಎಂದು|**
**ತಲೆ ಹತ್ತರವಗೆ ಪೇಳಲು ತಮ್ಮನ|**
**ಬಳಲಿಸಿ ಹೊರಡಿಸಲವನಿನ್ನ ಮೊರೆ ಹೋಗೆ|**
**ಸಲೆ ವಿಭೀಷಣಗೆ ಲಂಕೆಯನಿತ್ತುದ ಕೇಳಿ||೬||"**

ವರೊನ್ಮತ್ತ ರಾವಣನ ಸಂಹಾರಮಾಡಿ ವಿಭೀಷಣನಿಗೆ
ಲಂಕಾರಾಜ್ಯ ಪಟ್ಟವನ್ನು ಕೊಟ್ಟದ್ದು,

ಕೊನೆಯದಾಗಿ ವೆಂಕಟೇಶ ಮಾಹಾತ್ಮೆ

**"ಸುರನರನಾಗ ಲೋಕದ ಭಕ್ತ ಜನರನ್ನು|**
**ಪೊರೆಯ ಲೋಸುಗ ವೈಕುಂಠದಿಂದ||**
**ಸಿರಿ ಸಳಿತದಲೆ ಬಂದು ಶೇಷಾಚಲದಿನಿಂದು|**
**ಪುರಂದರ ವಿಠಲ ನಿನ್ನಯ ಚರಣವ ಕಂಡು||೭||"**

ಹೀಗಿದೆ ಪರಮಾತ್ಮನ ನಿರ್ವ್ಯಾಜ ಕಾರುಣ್ಯ ಶ್ರೀ ಹರಿಯದು ಯಾವಾಗಲೂ ಅನಿಮಿತ್ತ ಬಾಂಧವ್ಯವೇ ಯಾಕೆಂದರೆ ಜೀವರುಗಳಿಂದ ಆತ ಏನೂ ಅಪೇಕ್ಷಿಸುವದಿಲ್ಲ **"ಪೂರ್ಣ ಕಾಮಸ್ಯ ಕಾಸ್ಪೃಹಾ"** ಪೂರ್ಣ ಕಾಮನಾದವನಿಗೆ ಬೇರೆ ಏನು ಉಚ್ಚೆ ಜೀವರುಗಳಾದರೂ ಆತನಿಗೆ ಏನು ತಾನೇ ಮಾಡಲು ಅಥವಾ ಕೊಡಲು ಸಮರ್ಥರು? ಬ್ರಹ್ಮಾಂಡವೆಲ್ಲ ಅವನದೇ ಹೀಗೆ ಅವನಿಂದ ಕರುಣೆ ಪಡೆದವರು, ಪಡೆಯಲಿಚ್ಚಿಸುವವರು ಅವನ ಮಹಾತ್ಮೆಯನ್ನು ತಿಳಿದು ಅವನಲ್ಲಿ ಧೃಡತರ ಸ್ನೇಹ ಮಾಡಿ, ಆತನ ಪ್ರೀತಿಗಾಗಿ ಸಕಲ ವ್ಯಾಪಾರಗಳನ್ನು ಮಾಡಿ ಅವನಿಗೊಪ್ಪಿಸಿ, ಆತನ ಸ್ಮರಣೆಯಲ್ಲಿದ್ದು ಈ ಭವ

ಬಂಧನದಿಂದ ಪಾರಾಗುವದೇ ಸದುಪಾಯವೆಂದು ಪುರಂದರ ದಾಸಾರ್ಯರು ತೋರಿದ ಹೆದ್ದಾರಿ ಇಲ್ಲಿಗೆ ಐದು ಭಾಗ ಸಮಾಪ್ತಿ.

**ಇತಿ ಶ್ರೀ ಮಧ್ವೇಶಾರ್ಪಣಮಸ್ತು**